32 ಶ್ರೀ ಮಂಜು ಎ. (ಅರಕಲಗೂಡು) ಮತ್ತು ಆರ್. ನರೇಂದ್ರ (ಹನೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) 2009–10, 2010–11 ಮತ್ತು 2011–12ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಇಲಾಖೆಗೆ ಘೋಷಿಸಲಾದ ಅನುದಾನದ ಮೊತ್ತವೆಷ್ಟು? ಬಿಡುಗಡೆಯಾದ ಮೊತ್ತವೆಷ್ಟು? ಎಷ್ಟು ವೆಚ್ಚ ಮಾಡಲಾಗಿದೆ;

ಆ) ಈ ಸಾಲುಗಳಲ್ಲಿ ಆಯವ್ಯಯದಲ್ಲಿ ಇಲಾಖೆಯ ಮುಖಾಂತರ ಜಾರಿಗೊಳಿಸಲು ಪ್ರಕಟಿಸಿದ ಹೊಸ ಯೋಜನೆಗಳಾವುವು; (ಯೋಜನೆಗಳ ಸರ್ಕಾರಿ ಆದೇಶದ ಪ್ರತಿಗಳನ್ನು ಒದಗಿಸುವುದು)

ಇ) ಹಾಗಿದ್ದಲ್ಲಿ ಈ ಯೋಜನೆಗಳಿಗೆ ಘೋಷಿಸಲಾದ ಅನುದಾನವೆಷ್ಟು; ಎಷ್ಟು ಮೊತ್ತ ಬಿಡುಗಡೆ ಮಾಡಲಾಗಿದೆ, ಎಷ್ಟು ವೆಚ್ಚ ಮಾಡಲಾಗಿದೆ; ಯೋಜನೆಗಳ ಪ್ರಸಕ್ತ ಸ್ಥಿತಿ ಏನು; (ವರ್ಷವಾರು ಮಾಹಿತಿ ಒದಗಿಸುವುದು)

ಈ) ಕೇಂದ್ರ ಸರ್ಕಾರದಿಂದ ಇಲಾಖೆಗೆ ಕಳೆದ ಮೂರು ಸಾಲಿನಲ್ಲಿ ಎಷ್ಟು ಸಹಾಯಧನ/ಅನುದಾನ/ಸಾಲ/ One Time Grant ಬಂದಿರುತ್ತದೆ. ರಾಜ್ಯ ಸರ್ಕಾರವು ನೀಡಬೇಕಿದ್ದ ಮ್ಯಾಚಿಂಗ್ ಗ್ರ್ಯಾಂಟ್ಸ್ ಎಷ್ಟು ನೀಡಬೇಕಾಗಿತ್ತು; ಎಷ್ಟು ನೀಡಲಾಗಿದೆ; ಲ್ಯಾಪ್ಸ್ ಮಾಡಿದ ಗ್ರ್ಯಾಂಟ್ಸ್‌ಗಳೆಷ್ಟು; (ವಿವರ ಒದಗಿಸುವುದು)

ಉ) ಕೇಂದ್ರ ಸರ್ಕಾರದ ಬಳಿ ಇಲಾಖೆಯ ಯಾವ ಯಾವ ಪ್ರಸ್ತಾವನೆಗಳು ಬಾಕಿ ಇರುತ್ತವೆ; ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಹೊಸದಾಗಿ ಎಷ್ಟು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ; (ಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) ;–

ಅ) 2009–10ರಿಂದ 2011–12ನೇ ಸಾಲುಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಒದಗಿಸಲಾದ ಆಯವ್ಯಯ ಅನುದಾನ, ಬಿಡುಗಡೆಗೊಳಿಸಲಾದ ಮೊತ್ತ, ನಿರ್ವಹಿಸಲಾದ ಕಾಮಗಾರಿಗಳ ವೆಚ್ಚಗಳು.

(ರೂ. ಕೋಟಿಗಳಲ್ಲಿ)

ವರ್ಷ	ಅನುದಾನ	ಬಿಡುಗಡೆ	ವೆಚ್ಚ	ನಿರ್ವಹಿಸಲಾದ ಕಾಮಗಾರಿ
2009–10	3794.04	3623.42	3109.69	3623.42
2010–11	4497.61	4159.40	3505.56	4159.40
2011–12	5789.94	4270.15	3250.76	4505.76
ಒಟ್ಟು	**14081.59**	**12052.97**	**9866.01**	**12288.58**

ನಿರ್ವಹಿಸಲಾದ ಕಾಮಗಾರಿಯ ಬಾಕಿ ಬಿಲ್ಲುಗಳನ್ನು ಏಪ್ರಿಲ್ ಮಾಹೆಯಲ್ಲಿ ಪಾವತಿಸಲಾಗಿದೆ. ಅನುದಾನ ಪೂರ್ಣವಾಗಿ ಬಳಕೆ ಮಾಡಿಕೊಳ್ಳಲಾಗಿದೆ.

ಆ) ಸದರಿ ವರ್ಷಗಳಲ್ಲಿ ಕೈಗೊಳ್ಳಲಾದ ನೀರಾವರಿ ಯೋಜನೆಗಳ ಸಂಖ್ಯೆ:17 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಇ) ಸದರಿ ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಹಾಗೂ ವೆಚ್ಚಗಳು ಅನುಕ್ರಮವಾಗಿ ರೂ.2782.69 ಕೋಟಿಗಳು ಮತ್ತು ರೂ.2239.24 ಕೋಟಿಗಳು.

ಈ) ರಾಜ್ಯದ 12 ನೀರಾವರಿ ಯೋಜನೆಗಳಿಗೆ ಕೇಂದ್ರ ನೆರವು ಎಐಬಿಪಿ ಅಡಿಯಲ್ಲಿ ಕೇಂದ್ರ ಹಾಗೂ ರಾಜ್ಯದ ಪಾಲು ಡಿಪಿಎಪಿ ಪ್ರದೇಶಕ್ಕೆ 90:10 ಸಾಮಾನ್ಯ ಪ್ರದೇಶಕ್ಕೆ 25:75.

ವರ್ಷ	ಕೇಂದ್ರ ನೆರವು	ವೆಚ್ಚ (ರೂ. ಕೋಟಿಗಳಲ್ಲಿ)
2009–10	776.50	791.16
2010–11	532.93	1024.86
2011–12	406.89	771.53

19.03.2012 ರವರೆಗಿನ ಕೇಂದ್ರ ನೆರವು ಬಿಡುಗಡೆ.

ಊ) ರಾಜ್ಯದ ನೀರಾವರಿ ಯೋಜನೆಗಳಾದ ಭದ್ರಾ ಮೇಲ್ದಂಡೆ ಯೋಜನೆ, ತುಂಗಾ ಮೇಲ್ದಂಡೆ ಯೋಜನೆ, ಸಿಂಗಟಲೂರು ಏತ ನೀರಾವರಿ ಯೋಜನೆ ಮತ್ತು ಸನ್ನತಿ ಏತ ನೀರಾವರಿ ಯೋಜನೆಗಳಿಗೆ ಜಲ ಸಂಪನ್ಮೂಲ ಮಂತ್ರಾಲಯದಿಂದ ಮತ್ತು ಯೋಜನಾ ಆಯೋಗದ ತೀರುವಳಿ ಬಾಕಿ ಇರುತ್ತದೆ.

ಕಳೆದ 3 ವರ್ಷಗಳಲ್ಲಿ ಶ್ರೀರಾಮೇಶ್ವರ ಏತ ನೀರಾವರಿ ಯೋಜನೆ ಮತ್ತು ಗುಲ್ಬರ್ಗಾ ಜಿಲ್ಲೆಯ 3 ಮಧ್ಯಮ ನೀರಾವರಿ ಯೋಜನೆಗಳ ಅನುಮೋದನೆ ಪಡೆದುಕೊಳ್ಳಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 32ಕ್ಕೆ ಅನುಬಂಧ

ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಹೊಸದಾಗಿ ಕೈಗೊಳ್ಳಲಾದ ನೀರಾವರಿ ಯೋಜನೆಗಳ ವಿವರಗಳು

(ರೂ. ಕೋಟಿಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಅನುದಾನ	ವೆಚ್ಚ
1	ಭದ್ರಾ ಮೇಲ್ದಂಡೆ ಯೋಜನೆ ಹಂತ 1	338.83	320.50
2	ರಾಜನಹಳ್ಳಿ ಏತ ನೀರಾವರಿ ಯೋಜನೆ	30	51.18
3	ತಿಳುವಳ್ಳಿ ಏತ ನೀರಾವರಿ ಯೋಜನೆ	8.00	0.006
4	ದಂಡಾವತಿ ಏತ ನೀರಾವರಿ ಯೋಜನೆ	85.00	0.90

5	ಶಿಗ್ಗಾಂವ್ ಏತ ನೀರಾವರಿ ಯೋಜನೆ	157.00	150.17
6	ಸೌಪರ್ಣಿಕಾ ನದಿಗೆ ಬ್ರಿಡ್ಜ್ ಕಂ ಬ್ಯಾರೇಜು	5.50	0.00
7	**ಆಂಜಿಟ್ಟು ನಾಲೆಗಳ ಆಧುನೀಕರಣ**		
ಎ)	ಕೃಷ್ಣರಾಜ (ಕಟ್ಟಿಪುರ)	50.00	30.12
ಬಿ)	ಮಂದಗೆರೆ ಮತ್ತು ಹೇಮಗಿರಿ	45.00	25.00
8	ತುಂಗಾ ಎಡದಂಡೆ ಆಧುನೀಕರಣ ಹಾಗೂ ಯೋಜನೆಯ ನಾಲೆಗಳ ಆಧುನೀಕರಣ	892.93	850.20
9	ಭದ್ರಾ ನಾಲೆಗಳ ಆಧುನೀಕರಣ	712.54	526.16
10	ಇಂಡಿ ಏತ ನೀರಾವರಿ ಯೋಜನೆ (ಕಿ.ಮೀ. 97.3 ರಿಂದ 128 ರವರೆಗೆ)	46.09	49.50
11	ಮಲ್ಲಾಬಾದ್ ಏತ ನೀರಾವರಿ ಯೋಜನೆ	48.25	11.09
12	ಚಿಮ್ಮಲಗಿ ಏತ ನೀರಾವರಿ ಯೋಜನೆಯ ಮುಖ್ಯಸ್ಥಾವರ ಹಾಗೂ, ಪಶ್ಚಿಮ ಕಾಲುವೆ ಕಿ.ಮೀ. 54ರ ವರೆಗೆ	44.00	34.59
13	ಎತ್ತಿನಹೊಳೆ ಯೋಜನೆ	–	–
14	ಗೂಳೂರು-ಹೆಬ್ಬೂರು	55.00	51.69
15	ಹೊನ್ನವಳ್ಳಿ ಏತ ನೀರಾವರಿ ಯೋಜನೆ	87.20	21.21
16	ಚಾಮರಾಜನಗರ ತಾಲ್ಲೂಕು ಕುಡಿಯುವ ನೀರಿನ ಯೋಜನೆ	40.00	0.00
17	ಕಬಿನಿ ನಾಲೆ ಆಧುನೀಕರಣ (ಲೈನಿಂಗ್)	137.35	75.19
	ಒಟ್ಟು	**2782.69**	**2197.51**